## ಸಾಮಾಜಿಕ ಪರಿವರ್ತನೆಯಲ್ಲಿ ಮಹಿಳೆಯರ ಪಾತ್ರ

ನವರಾತ್ರಿಯ ಪರ್ವ ದಿನಗಳಂದು ನಾವು ದೇವಿಯನ್ನು ಆರಾಧಿಸುತ್ತೇವೆ. "**ಯಾ ದೇವೀ ಸರ್ವಭೂತೇಷು ಚೇತನೇತಿ ಅಭಿಧೀಯತೇ**"– "*ಸರ್ವ ಜಂತುಗಳಲ್ಲಿ ಚೈತನ್ಯ ರೂಪದಲ್ಲಿ ದೇವಿ ಇರುವಳು*" ಎಂದು ದುರ್ಗಾ ಸಪ್ತಶತಿ ಹೇಳುತ್ತದೆ. ಜಗತ್ತಿನ ಸೃಷ್ಟಿಯ ಮೂಲವೇ ಶಕ್ತಿ. ಪರವಸ್ತುವಿನ ಶಕ್ತಿತತ್ತ್ವದ ಆವಿರ್ಭಾವಗಳೇ ಜಗತ್ತಿನ ಎಲ್ಲ ಸ್ತ್ರೀಯರು. ಹಾಗೆಂದೇ ಶ್ರೀರಾಮಕೃಷ್ಣರು ಜಗತ್ತಿನ ಎಲ್ಲ ಸ್ತ್ರೀಯರನ್ನೂ ಜಗನ್ಮಾತೆಯ ಭಾವನೆಯಿಂದ ನೋಡುತ್ತಿದ್ದರು.


ಸ್ತ್ರೀಯರಿಗೆ ಯಾವ ಸಮಾಜದಲ್ಲಿ ಸ್ಥಾನಮಾನಗಳು ದೊರೆಯುತ್ತವೆಯೋ ಆ ಸಮಾಜ ಮಾತ್ರ ಉನ್ನತೋನ್ನತ ಅಭಿವೃದ್ಧಿಯನ್ನು ಕಾಣಬಲ್ಲದು ಎನ್ನುವುದು ಭಾರತೀಯ ಪರಂಪರೆಯ ಅಭಿಪ್ರಾಯ. ಆದರೆ, ಜಾಗತಿಕವಾಗಿಯೂ ಭಾರತದಲ್ಲಿಯೂ ಸ್ತ್ರೀಯರ ಸ್ಥಾನ ಬಹಳ ಕೆಳಮಟ್ಟದಲ್ಲಿರುವುದು ಮಾತ್ರವಲ್ಲ, ಶಾರೀರಿಕವಾಗಿ, ಮಾನಸಿಕವಾಗಿ ಶೋಷಣೆಗೆ ಅತ್ಯಂತ ಸುಲಭವಾಗಿ ಒಳಗಾಗುವ ವರ್ಗವೆಂದರೆ ಮಹಿಳೆಯರೇ ಆಗಿದ್ದಾರೆ ಎನ್ನುವುದು ವಿಪರ್ಯಾಸ.

ಈ ನಿಟ್ಟಿನಲ್ಲಿ ವಿಶ್ವಸಂಸ್ಥೆಯ (UNITED NATIONS) ಸಮಿತಿಯೊಂದು ಮುಂದಿನ ಹತ್ತು ವರ್ಷಗಳಲ್ಲಿ ಮಹಿಳೆಯರನ್ನು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಮಹತ್ವದ ನಿರ್ಧಾರಗಳಲ್ಲಿ ಸಹಭಾಗಿಗಳನ್ನಾಗಿಯೂ ಪಾಲುದಾರರನ್ನಾಗಿಯೂ ನಿಯೋಜಿಸುವ ಕ್ರಿಯಾಯೋಜನೆಯೊಂದನ್ನು ಹಾಕಿಕೊಂಡಿರುವುದು ಅತ್ಯಂತ ಸ್ತುತ್ಯವಾಗಿದೆ.

VIJAY TIMES ಪತ್ರಿಕೆಯು ಪ್ರಕಟಿಸಿರುವ ವರದಿಯಲ್ಲಿ ಮಹಿಳೆಯರು ಮಹತ್ವದ ಭೂಮಿಕೆಯನ್ನು ತಳೆಯಬೇಕಾದ ಹಲವಾರು ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, **ಶಸ್ತ್ರ ಸಂಘರ್ಷ, ಬಡತನ ನಿರ್ಮೂಲನೆ, ಆರ್ಥಿಕ ಅಭಿವೃದ್ಧಿ, ಏಡ್ಸ್ ನಿವಾರಣೆ ಮತ್ತು ಶಿಕ್ಷಣ.**

**ಶಸ್ತ್ರಸಂಘರ್ಷಕ್ಕೆ** ಎಡೆಮಾಡಿಕೊಡುವ ಹಲವಾರು ವಿವಾದಗಳನ್ನು ಪರಿಹರಿಸುವಲ್ಲಿ ಮಹಿಳೆಯರು ಗಣನೀಯ ಪಾತ್ರ ವಹಿಸುವುದರಿಂದ ಸಕಾರಾತ್ಮಕ ಪರಿಣಾಮ ಒದಗಿ ಬಂದಿರುವುದು ಸಾಬೀತಾಗಿದೆ. ಈ ಬಗೆಯ ಚರ್ಚೆಗಳಲ್ಲಿ ಪುರುಷರಿಗಿಂತಲೂ ಮಹಿಳೆಯರ ದೃಷ್ಟಿಕೋನ ವಿಭಿನ್ನವಾಗಿರುತ್ತದೆ. ಅವರು ಸಹಯೋಗಕ್ಕಾಗಿ ಹೆಚ್ಚಿನ ಒಲವು ತೋರುತ್ತಾರೆ ಮತ್ತು ಒಮ್ಮತದ ನಿರ್ಧಾರ ಮತ್ತು ಹೊಂದಾಣಿಕೆಗಳಿಗೆ ಒತ್ತನ್ನು ಕೊಡುತ್ತಾರೆ. ವಿವಾದಗಳನ್ನು ಪರಿಹರಿಸುವುದರಲ್ಲಿ ಸ್ತ್ರೀಯರು ಹೆಚ್ಚು ಪಾತ್ರ ವಹಿಸಿದರೆ ಜಗತ್ತಿನಲ್ಲಿ ಇಂದು ಕಾಣುವ ಮತ್ತು ಮುಂದೆ ಕಾಣಬೇಕಾಗಿ ಬರುವ ಬರ್ಬರ ಯುದ್ಧಗಳು ಮತ್ತು ಸಂಗ್ರಾಮಗಳು ಗಣನೀಯವಾಗಿ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ.

ಹೀಗೆಯೇ, **ಸಂವಿಧಾನಾತ್ಮಕವಾದ ಸಂಸತ್ತು ಮತ್ತು ಉನ್ನತ ಅಧಿಕಾರದ ಸ್ಥಾನಗಳಲ್ಲಿ ಕೂಡ ಮಹಿಳೆಯರ ಭಾಗವಹಿಸುವಿಕೆ** ಹೆಚ್ಚಾಗಬೇಕಾಗಿರುವುದು ಅನಿವಾರ್ಯ. ಹಾಗೆಂದೇ ವಿಶ್ವಸಂಸ್ಥೆಯು ಮಹಿಳೆಯರಿಗೆ ಶೇಕಡಾ ೩೦ರಷ್ಟು ಸ್ಥಾನಗಳಲ್ಲಿ, ಮಹಿಳಾ ಉಮೇದುವಾರರನ್ನು ನಿಲ್ಲಿಸುವಂತೆ ರಾಜಕೀಯ ಪಕ್ಷಗಳನ್ನು ಉತ್ತೇಜಿಸುತ್ತದೆ. ಸ್ಕಾಟ್‌ಲೆಂಡ್ ದೇಶದ ಲೇಬರ್ ಪಕ್ಷವು ತನ್ನ ಉಮೇದುವಾರರಲ್ಲಿ ಅರ್ಧಭಾಗ ಮಹಿಳೆಯರೇ ಇರಬೇಕೆಂಬ ನಿಯಮವನ್ನು ಹೊಂದಿದೆ. ಹೀಗಾಗಿ ಸ್ಕಾಟಿಷ್ ಪಾರ್ಲಿಮೆಂಟಿನ ೧೨೯ ಕ್ಷೇತ್ರಗಳಲ್ಲಿ ಶೇಕಡ ೪೦ರಷ್ಟು ಸ್ಥಾನಗಳನ್ನು ಸ್ತ್ರೀಯರೇ ಅಲಂಕರಿಸಿದ್ದಾರೆ. ವೇಲ್ಸ್‌ನ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಅದರ ಪ್ರಮಾಣ ಶೇಕಡ ೫೦ರಷ್ಟು.




ಮೂರನೆಯ ಪ್ರಮುಖ ಕ್ಷೇತ್ರವೆಂದರೆ, **ಬಡತನ ನಿರ್ಮೂಲನ ಮತ್ತು ಆರ್ಥಿಕ ಅಭಿವೃದ್ಧಿ.** ವಿಶ್ವಸಂಸ್ಥೆಯ ಒಂದು ಆಯೋಗದ ಪ್ರಕಾರ ಪ್ರಪಂಚದೆಲ್ಲೆಡೆ ಸ್ತ್ರೀಯರ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಉದಾಹರಣೆಗೆ, ಫಿಜಿ ದ್ವೀಪಗಳು ಮತ್ತು ಪೆಸಿಫಿಕ್ ಪ್ರದೇಶಗಳ ಬಡತನ ಮತ್ತು ಕುಂಠಿತ ಆರ್ಥಿಕ ಸ್ಥಿತಿಗೆ ಮುಖ್ಯ ಕಾರಣ, ಅಲ್ಲಿನ ಸ್ತ್ರೀಯರು ಆ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸದಿರುವುದು. ಇದನ್ನು ಸರಿಪಡಿಸಲು, ಫಿಜಿಯಲ್ಲಿ ಗ್ರಾಮೀಣ ಬ್ಯಾಂಕಿಂಗ್ ಯೋಜನೆ ಆರಂಭಿಸಲಾಯಿತು. ಇದರಿಂದಾಗಿ ಅನೇಕ ಗ್ರಾಮೀಣ ಮಹಿಳೆಯರು ಬ್ಯಾಂಕ್‌ಗಳ ಪ್ರಯೋಜನವನ್ನು ಪಡೆದುಕೊಳ್ಳಲು ಸಹಾಯವಾಯಿತು. ಬಡತನ ನಿರ್ಮೂಲನೆಯಲ್ಲಿಯೂ, ಸ್ತ್ರೀಯರ ಪಾತ್ರ ಗಣನೀಯವೆಂದು ಪರಿಗಣಿಸಲಾಗಿದೆ. ಈ ನಿಟ್ಟಿನಲ್ಲಿ ಅಭಿವೃದ್ಧಿಯ ಧ್ಯೇಯೋದ್ದೇಶಗಳ ನಿರ್ಧಾರದಲ್ಲಿ ಮಹಿಳೆಯರನ್ನು ಹೆಚ್ಚಾಗಿ ತೊಡಗಿಸಿಕೊಳ್ಳಬೇಕು. ಹಾಗೆಯೇ, ಅವರ ಮಾನವೀಯ ಮತ್ತು ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗೆ ಪ್ರಾಮುಖ್ಯತೆ ನೀಡಬೇಕು. ಸರ್ಕಾರಿ ಮತ್ತು ಇತರ ಸೇವೆಗಳಲ್ಲಿ ಅವರ ಪಾತ್ರ ಹೆಚ್ಚಾಗಬೇಕು– ಇವು ವಿಶ್ವಸಂಸ್ಥೆಯ ಆಯೋಗ ಗಮನ ಹರಿಸಿರುವ ಕೆಲವು ಪ್ರಮುಖ ಅಂಶಗಳು.

**ಏಡ್ಸ್ ನಿವಾರಣೆಯಲ್ಲಿಯೂ,** ಸ್ತ್ರೀಯರ ಪಾತ್ರ ಪುರುಷರಿಗಿಂತ ಬಹು ಮುಖ್ಯವಾದುದು. ಜೈವಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ, ಇದಕ್ಕೆ ಬಲಿಪಶುಗಳಾಗುವವರು ಮಹಿಳೆಯರೇ. ಇದರ ಬಗ್ಗೆ ಸರಿಯಾದ ಅರಿವು ಸ್ತ್ರೀಯರಲ್ಲಿ ಮೂಡಿದಾಗ ಮಾತ್ರ ಪರಿಣಾಮಕಾರೀ ಪರಿಹಾರ ದೊರಕಬಲ್ಲುದು. ಮಹಿಳಾ ಪುರೋವೃದ್ಧಿಗೆ ಮಾರಕವಾಗಿರುವ ಈ ರೋಗದ ಹತೋಟಿ, ಶಿಕ್ಷಿತ ಮಹಿಳೆಯರಿಂದ ಮಾತ್ರ ಸಾಧ್ಯ.

ಸ್ವಾಮಿ ವಿವೇಕಾನಂದರು ಹೇಳುವಂತೆ, ಸ್ತ್ರೀಯರ ಎಲ್ಲಾ ಸಮಸ್ಯೆಗಳಿಗೆ ರಾಮಬಾಣವೆಂದರೆ **ಶಿಕ್ಷಣ**ವೆಂಬ ಪವಾಡಮಂತ್ರ. ಕೇವಲ ಶಿಕ್ಷಣ ಮಾತ್ರ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸಬಲ್ಲುದು.

ಮಹಿಳಾ ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ. ಮಹಿಳೆಯರು, ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರು, ತಮ್ಮ ಕೀಳರಿಮೆ, ಶೋಷಣೆ ಮತ್ತು ಅನಕ್ಷರತೆ– ಇವುಗಳಿಂದ ಹೊರಬಂದು, ಸಮಾಜ ಸ್ವಾಸ್ಥ್ಯಕ್ಕಾಗಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬಲ್ಲ ಪದವಿಗಳನ್ನು ಮತ್ತು ಅಧಿಕಾರವನ್ನು ಪಡೆಯಬೇಕು. ಆ ಮೂಲಕ ತಾಯಿ, ತನ್ನ ಕುಟುಂಬವನ್ನು ಮಾತೃವಾತ್ಸಲ್ಯದಿಂದ ಹೇಗೆ ಪೋಷಿಸುತ್ತಾಳೋ, ಹಾಗೆ ಸಮಾಜವನ್ನು ಪೋಷಿಸಲು ಸನ್ನದ್ಧರಾಗಬೇಕು. ಇದೇ ನಿಜವಾದ ಮಹಿಳಾ ಸ್ವಾತಂತ್ರ್ಯ.

ಎಲ್ಲ ಸ್ತ್ರೀಯರೂ ಜಗನ್ಮಾತೆಯ ಪ್ರತಿರೂಪರೆಂದು ಸ್ತೋತ್ರದಲ್ಲಿ ಪಠಿಸುವ ನಾವು ಅವರ ಕಂಗಳಲ್ಲಿ ಕಾಣಬರುವ ಆಕಾಂಕ್ಷೆಯನ್ನು ಕಾಣುತ್ತಿಲ್ಲ, ಏಕೆ? ಗುಡಿಯ ದೇವಿಯನ್ನು ಪೂಜಿಸುವ, ಆದರೆ ಬಡ ಹುಡುಗಿಯೊಬ್ಬಳ ಕಾರ್ಪಣ್ಯವನ್ನು ಪರಿಹರಿಸಲಾಗದ ನಮ್ಮ ಧರ್ಮಕ್ಕೆ, ಆಧ್ಯಾತ್ಮಿಕತೆಗೆ ಅರ್ಥವಿದೆಯೇ? ಯೋಚಿಸಬೇಕಾದ ವಿಷಯ ಇದು. ✪